# ಕರ್ನಾಟಕ ವಿಧಾನಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 26-03-2021 ಪ್ರಶ್ನೆ ಸಂಖ್ಯೆ : 1957(2239)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಸುನೀಲ್ ಗೌಡ ಬಸನಗೌಡ ಪಾಟೀಲ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 26-03-2021

ಉತ್ತರಿಸುವ ಸಚಿವರು: ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ವಿಷಯ : ಪಿ.ಡಿ.ಓ., ಎ.ಡಿ ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳ ಸೇವೆಗಳಿಗೆ ಸಂಬಂಧಿಸಿದಂತೆ

(ಅ) 2010 ರಿಂದ 2020 ರವರೆಗೆ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಸಹಾಯಕ ನಿರ್ದೇಶಕ, ಕಾರ್ಯನಿರ್ವಾಹಕ, ಉಪಕಾರ್ಯದರ್ಶಿ ಹುದ್ದೆಗಳಲ್ಲಿದ್ದ ಎಷ್ಟು ಜನರಿಗೆ ಕ.ನಾ.ಸೇ(ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 19 (3)(ಛ) ಪ್ರಕಾರ ಬಡ್ತಿ ನೀಡಿ ಆದೇಶ ಹೊರಡಿಸಲಾಗಿದೆ; (ಸದರಿ ಕಡತದ ಟಿಪ್ಪಣಿ ಪ್ರತಿ ಹಾಗೂ ಆದೇಶದ ಪ್ರತಿಗಳನ್ನು ಒದಗಿಸುವುದು)

(ಆ) ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ದಿನಾಂಕ:18-11-2013 ರ ರಾಜ್ಯ ಕರಡು ಜೇಷ್ಠತಾ ಪಟ್ಟಿಯಲ್ಲಿ, ಕೆ.ಸಿ.ಎಸ್.ನಿಯಮ 32ರಡಿಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಹೆಚ್ಚುವರಿ ಪ್ರಭಾರ ಪಡೆದು ಪೂರ್ವಾನ್ವಯ ದಿನಾಂಕದಿಂದಲೇ ಮುಂಬಡ್ತಿ ನೀಡಿರುವುದು ಕಾನೂನು ಬಾಹಿರ ಎಂದು ಪಿ.ಡಿ.ಓಗಳು ಆಕ್ಷೇಪಣೆ ವ್ಯಕ್ತ ಪಡಿಸಿರುವುದು ನಿಜವೇ; ಹೌದಾದಲ್ಲಿ, ಈ ಕುರಿತು ಸಂಬಂಧಪಟ್ಟ ಜಿಲ್ಲಾ ಪಂಚಾಯಿತಿಗಳಿಗೆ ಇಲಾಖೆಯು ಪತ್ರ ಬರೆದಿದೆಯೇ; ಹಾಗಿದ್ದಲ್ಲಿ, ಪತ್ರದ ಪ್ರತಿಗಳನ್ನು ಒದಗಿಸುವುದು;

(ಇ) ಈ ಕುರಿತು ಸಂಬಂಧಪಟ್ಟ ಜಿಲ್ಲಾ ಪಂಚಾಯತಿಗಳಿಂದ ಪಡೆದ ದಾಖಲೆಗಳ ಪ್ರತಿಗಳನ್ನು ಇಲಾಖೆಯು ಸ್ವೀಕರಿಸಿದೆಯೇ; ಹೌದಾದಲ್ಲಿ, ಸದರಿ ದಾಖಲೆಗಳನ್ನು ಪರೀಶಿಲಿಸಿ ಕೈಗೊಂಡ ಕ್ರಮಗಳೇನು;

(ಈ) ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತಿಯಲ್ಲಿ ದಿನಾಂಕ:09-03-2010ರಿಂದ ಪೂರ್ವಾನ್ವಯವಾಗುವಂತೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಬಡ್ತಿ ನೀಡಿರುವುದು ನಿಜವೇ; ಹೌದಾದಲ್ಲಿ, ಸದರಿ ಬಡ್ತಿ ನೀಡಿರುವುದು ಕಾನೂನು ಬಾಹಿರವಾಗುವುದಲ್ಲವೇ; ಸದರಿ ಕಾನೂನು ಬಾಹಿರ ಬಡ್ತಿ ಪ್ರಕ್ರಿಯೆಗೆ ಕಾರಣಕರ್ತರಾದ ಅಧಿಕಾರಿಗಳು ಯಾರು ಯಾರು;

ಇವರ ವಿರುದ್ಧ ಕೈಗೊಂಡ ಕ್ರಮಗಳೇನು; (ಹೆಸರು, ಪದನಾಮಗಳೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು)

(ಉ) ಕಾನೂನು ಬಾಹಿರವಾಗಿ ಬಡ್ತಿ ಪಡೆದವರು ಪ್ರಸ್ತುತ ಯಾವ ಹುದ್ದೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ ಹಾಗೂ ಸದರಿಯವರಿಗೆ ಹಿಂಬಡ್ತಿ ನೀಡಲಾಗಿದೆಯೇ; ಹಿಂಬಡ್ತಿ ನೀಡದಿದ್ದಲ್ಲಿ, ಅದಕ್ಕೆ ಕಾರಣವೇನು? (ವಿವರ ಒದಗಿಸುವುದು)